# ಕರ್ನಾಟಕ ಸರ್ಕಾರ

(ವಸತಿ ಇಲಾಖೆ)

ಸಂಖ್ಯೆ: ವಇ/56/ಕಾ/2022

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 27-07-2022.

## ತಿಳುವಳಿಕೆ ಪತ್ರ

ವಿಷಯ ಶ್ರೀಮತಿ ರೋಹಿಣಿ ಸಿಂಧೂರಿ, ಭಾ.ಆ.ಸೇ ಹಿಂದಿನ ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ ಇವರ ವಿರುದ್ಧ ಆರೋಪಗಳ ಕುರಿತು ಪ್ರಾಥಮಿಕ ತನಿಖೆ ನಡೆಸುವ ಬಗ್ಗೆ.

ಉಲ್ಲೇಖ
1. ಶ್ರೀ ಸಾರಾ ಮಹೇಶ್, ಮಾನ್ಯ ಶಾಸಕರು ಮತ್ತು ಮಾಜಿ ಸಚಿವರು ಹಾಗೂ ಅಧ್ಯಕ್ಷರು ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿ, ಕೃಷ್ಣರಾಜನಗರ ಕ್ಷೇತ್ರ, ಮೈಸೂರು ಜಿಲ್ಲೆ ಇವರ ಪತ್ರ ದಿ: 03.09.2021.
2. ಶ್ರೀ ಸಾ.ರಾ. ಮಹೇಶ್, ಮಾನ್ಯ ಶಾಸಕರು ಮತ್ತು ಮಾಜಿ ಸಚಿವರು ಹಾಗೂ ಅಧ್ಯಕ್ಷರು ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿ, ಕೃಷ್ಣರಾಜನಗರ ಕ್ಷೇತ್ರ, ಮೈಸೂರು ಜಿಲ್ಲೆ ಇವರ ಪತ್ರ ದಿ: 30.07.2021.
3. ಶ್ರೀ ಶೈಲೇಂದ್ರ ವಿ.ಭೀಮ್ ರಾವ್, ಮಾಜಿ ಉಪ ಮಹಾಪೌರರು, ಮೈಸೂರು ಮಹಾನಗರ ಪಾಲಿಕೆ, ಮೈಸೂರು ಇವರ ಪತ್ರ ದಿ: 15.06.2021.

••••••••

ಶ್ರೀಮತಿ ರೋಹಿಣಿ ಸಿಂಧೂರಿ, ಭಾ.ಆ.ಸೇ., ಆಯುಕ್ತರು, ಹಿಂದೂ ಧಾರ್ಮಿಕ ಹಾಗೂ ದತ್ತಿಗಳ ಇಲಾಖೆ ಇವರು ಈ ಹಿಂದೆ ಮೈಸೂರು ಜಿಲ್ಲೆಯ ಜಿಲ್ಲಾಧಿಕಾರಿಗಳಾಗಿದ್ದಾಗ ಅವರು ಕೈಗೊಂಡ ಆಡಳಿತಾತ್ಮಕ ಚಟುವಟಿಕೆಗಳಲ್ಲಿ ಎಸಗಿದ್ದಾರೆ ಎನ್ನಲಾದ ಕರ್ತವ್ಯ ಲೋಪಗಳ ಬಗ್ಗೆ ಶ್ರೀ ಸಾ.ರಾ. ಮಹೇಶ್, ಮಾನ್ಯ ಶಾಸಕರು, ಕೃಷ್ಣರಾಜನಗರ ಕ್ಷೇತ್ರ ಮತ್ತು ಮಾಜಿ ಸಚಿವರು ಹಾಗೂ ಅಧ್ಯಕ್ಷರು ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿ, ಮೈಸೂರು ಜಿಲ್ಲೆ ಇವರ ಪತ್ರ ದಿನಾಂಕ: 30.07.2021 ಹಾಗೂ 03.09.2021 ರ ಪತ್ರಗಳಲ್ಲಿ ಮತ್ತು ಶ್ರೀ ಶೈಲೇಂದ್ರ .ವಿ.ಭೀಮ್ ರಾವ್, ಮಾಜಿ ಉಪ ಮಹಾಪೌರರು, ಮೈಸೂರು ಮಹಾನಗರ ಪಾಲಿಕೆ, ಮೈಸೂರು ಇವರ ದಿನಾಂಕ: 15.06.2021 ರ ಪತ್ರಗಳಲ್ಲಿ ಈ ಕೆಳಕಂಡ ಆರೋಪಗಳನ್ನು ಮಾಡಿರುತ್ತಾರೆ.

1. ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿನ ನಗರ ಮತ್ತು ಗ್ರಾಮಾಂತರ ಸ್ಥಳೀಯ ಸಂಸ್ಥೆಗಳ ಮುಖಾಂತರ ಪರಿಸರ ಸ್ನೇಹಿ ಬಟ್ಟೆ ಬ್ಯಾಗ್‌ಗಳನ್ನು ಖರೀದಿಸುವ ಸಂಬಂಧ ದಿನಾಂಕ: 09.04.2021 ರಲ್ಲಿ ಜಿಲ್ಲಾಧಿಕಾರಿಯವರ ಕಛೇರಿಯಿಂದ ಕಾರ್ಯಾದೇಶ ಹೊರಡಿಸಿದ್ದು, ಸದರಿ ಕಾರ್ಯಾದೇಶದಲ್ಲಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ ಇವರಿಂದ ಪರಿಸರ ಸ್ನೇಹಿ ಬಟ್ಟೆ ಬ್ಯಾಗ್‌ಗಳನ್ನು ಮೈಸೂರು ಜಿಲ್ಲೆಯ ವ್ಯಾಪ್ತಿಗೆ ಒಳಪಡುವ ನಗರ ಮತ್ತು ಗ್ರಾಮಾಂತರ ಸ್ಥಳೀಯ ಸಂಸ್ಥೆಗಳಿಗೆ ಸರಬರಾಜು ಮಾಡುವ ಸಂಬಂಧ 4 (ಜಿ) ವಿನಾಯಿತಿ ಅಡಿಯಲ್ಲಿ ದರಪಟ್ಟಿಗಳನ್ನು ಪಡೆದಿದ್ದು, ಅದರಂತೆ 5 ಕೆ.ಜಿ ಮತ್ತು 10 ಕೆ.ಜಿ ಸಾಮರ್ಥ್ಯದ ಬಟ್ಟೆ ಬ್ಯಾಗ್‌ಗಳಿಗೆ ರೂ. 52/- (ಜಿ.ಎಸ್.ಟಿ ಸೇರಿದಂತೆ) ನಿಗದಿಪಡಿಸಿ, ಒಟ್ಟು 14,71,458 ಬಟ್ಟೆ

ಬ್ಯಾಗ್‌ಗಳನ್ನು ಖರೀದಿಸಲು ಅನುಮೋದನೆ ನೀಡಿರುತ್ತಾರೆ. ಸದರಿ ಬಟ್ಟೆ ಬ್ಯಾಗ್‌ಗಳ ವಿತರಣೆ ಸಂಬಂಧ ಮೈಸೂರು ಮಹಾನಗರ ಪಾಲಿಕೆ ಮತ್ತು ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಸೇರಿರುವ ಎಲ್ಲಾ ಗ್ರಾಮ ಪಂಚಾಯಿತಿಗಳ ಹಾಗೂ ಪುರಸಭೆಗಳ ಸಾಮಾನ್ಯ ಸಭೆಯಲ್ಲಿ ಯಾವುದೇ ವಿಧವಾದ ಅನುಮೋದನೆಯನ್ನು ಪಡೆದಿರುವುದಿಲ್ಲ. ನಗರ ಮತ್ತು ಗ್ರಾಮಾಂತರ ಸ್ಥಳೀಯ ಸಂಸ್ಥೆಗಳು ಸ್ವಯಂ ಪರಿಪೂರ್ಣ ಸಂಸ್ಥೆಗಳಾಗಿದ್ದು, ಅವುಗಳಲ್ಲಿನ ಜನಪ್ರತಿನಿಧಿಗಳಲ್ಲಿನ ಅಧಿಕಾರವನ್ನು ಮೊಟಕುಗೊಳಿಸುವ ಉದ್ದೇಶದಿಂದ ಈ ರೀತಿ ಕಾರ್ಯಾದೇಶ ನೀಡಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದವರು ಸರಬರಾಜು ಮಾಡಿರುವ ಬಟ್ಟೆ ಬ್ಯಾಗ್‌ಗಳಷ್ಟೇ ಗುಣಮಟ್ಟ ಮತ್ತು ಗಾತ್ರ ಹೊಂದಿರುವ ಬ್ಯಾಗ್‌ಗಳು ಮುಕ್ತ ಮಾರುಕಟ್ಟೆಯಲ್ಲಿ ಜಿ.ಎಸ್.ಟಿ ಸೇರಿದಂತೆ 10/- ರಿಂದ 13/- ರೂ.ಗಳಲ್ಲಿ ಮಾರಾಟವಾಗುವ ಬಟ್ಟೆ ಬ್ಯಾಗ್‌ಗಳಿಗೆ ಸಗಟು ದರದಲ್ಲಿ ರೂ. 52/- ಗಳನ್ನು ನಿಗದಿಪಡಿಸಿ ಅನುಮೋದನೆ ನೀಡಿರುವುದು ಸಾರ್ವಜನಿಕ ಹಣದ ಅಪವ್ಯಯವಾಗಿರುತ್ತದೆ.

2. ಮೈಸೂರು ಜಿಲ್ಲೆಯ ಜಿಲ್ಲಾಧಿಕಾರಿಗಳಾಗಿದ್ದ ಶ್ರೀಮತಿ ರೋಹಿಣಿ ಸಿಂಧೂರಿ, ರವರು ಜಿಲ್ಲಾಧಿಕಾರಿಗಳ ಅಧಿಕೃತ ನಿವಾಸವಾದ ಪಾರಂಪರಿಕ ಕಟ್ಟಡದ ವ್ಯಾಪ್ತಿಯಲ್ಲಿ ಸುಮಾರು ರೂ. 50 ಲಕ್ಷಗಳ ವೆಚ್ಚದಲ್ಲಿ ಒಳಾಂಗಣ ಈಜಿಕೊಳ ಮತ್ತು ಜಿಮ್ ಅನ್ನು ಪರಾಂಪರಿಕ ಇಲಾಖೆಯ ಅನುಮತಿ ಇಲ್ಲದೇ ನಿರ್ಮಾಣ ಮಾಡಿರುವರು
3. ಜಲಸನ್ನದಿ ಪರಾಂಪರಿಕ ಕಟ್ಟಡವನ್ನು ಪರಾಂಪರಿಕ ಸಂರಕ್ಷಣಾ ಸಮಿತಿಯ ಅನುಮತಿ ಇಲ್ಲದೇ ನವೀಕರಿಸಿ ನೆಲ ಹಾಸಿಗೆ ವೆಟ್ರಿಫೈಡ್ ಟೈಲ್ಸ್ ಅಳವಡಿಸಿ ಹೆರಿಟೇಜ್ ರೆಗ್ಯೂಲೇಷನ್ ಉಲ್ಲಂಘನೆ ಮಾಡಿ ಸದರಿ ನವೀಕರಣ ಕಾರ್ಯಕ್ಕೆ ರೂ. 16.35 ಲಕ್ಷಗಳ ಹಣವನ್ನು ದುಂದುವೆಚ್ಚ ಮಾಡಿರುವರು.
4. 2021 ರ ಮೇ ತಿಂಗಳಿನಲ್ಲಿ ಮುಕ್ತಿದಾಮದ ಮಾಹಿತಿ ಪ್ರಕಾರ ಸೋಂಕಿನಿಂದ ಮೃತಪಟ್ಟವರ ಸಂ: 969 ಇದ್ದು ಜಿಲ್ಲಾಧಿಕಾರಿಗಳಾಗಿದ್ದ ಶ್ರೀಮತಿ ರೋಹಿಣಿ ಸಿಂಧೂರಿ ರವರು ಸರ್ಕಾರಕ್ಕೆ ಹಾಗೂ ಜಿಲ್ಲೆಯ ಜನತೆಗೆ ಸೋಂಕಿನಿಂದ ಮೃತಪಟ್ಟವರು 238 ಎಂದು ತಪ್ಪಾಗಿ ಮಾಹಿತಿ ನೀಡಿರುತ್ತಾರೆ.
5. ಚಾಮರಾಜನಗರ ಜಿಲ್ಲೆಯಲ್ಲಿ ಆಕ್ಸಿಜನ್ ಕೊರತೆಯಿಂದ 24 ಕೊರೋನಾ ಸೋಂಕಿತರ ಪ್ರಾಣ ಹೋಗಲು ಶ್ರೀಮತಿ ರೋಹಿಣಿ ಸಿಂಧೂರಿ ರವರು ಕಾರಣಕರ್ತರಾಗಿದ್ದಾರೆ.

ಮೇಲ್ಕಂಡ ದೂರುಗಳ ಹಿನ್ನಲೆಯಲ್ಲಿ ಶ್ರೀಮತಿ ರೋಹಿಣಿ ಸಿಂಧೂರಿ, ಭಾ.ಆ.ಸೇ., ಹಿಂದಿನ ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ ಇವರ ಮೇಲೆ ಹೊರಿಸಿರುವ ಆರೋಪಗಳ ಕುರಿತು ಸತ್ಯಾಸತ್ಯತೆಯನ್ನು ತಿಳಿಯುವ ಸಲುವಾಗಿ ಕರ್ನಾಟಕ ರಾಜ್ಯ ಸರ್ಕಾರವು ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ/218//ಸೇಅಸೆ/2022,ಬೆಂಗಳೂರು,ದಿನಾಂಕ:01.06.2022 ರಲ್ಲಿ ಹೊರಡಿಸಿರುವ ಆದೇಶದ ಪ್ರಕಾರ ಶ್ರೀಮತಿ ರೋಹಿಣಿ ಸಿಂಧೂರಿ, ಭಾ.ಆ.ಸೇ ಹಿಂದಿನ ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ ಇವರ ಮೇಲೆ ಹೊರಿಸಿರುವ ಆರೋಪಗಳ ಕುರಿತು ಪ್ರಾಥಮಿಕ ತನಿಖೆ ನಡೆಸಲು ಡಾ|| ಜೆ. ರವಿಶಂಕರ್ ಭಾ.ಆ.ಸೇ., ಸರ್ಕಾರದ ಕಾರ್ಯದರ್ಶಿ, ವಸತಿ ಇಲಾಖೆ ಆದ ನನ್ನನ್ನು ನೇಮಿಸಿ, ಆರೋಪಿತ ಅಧಿಕಾರಿಯ ವಿರುದ್ಧದ ಆರೋಪಗಳ ಸತ್ಯಾಂಶಗಳ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ವಿವರವಾದ ವರದಿಯನ್ನು ಸಲ್ಲಿಸಲು ನಿರ್ದೇಶಿತನಾಗಿದ್ದೇನೆ.

ಮೇಲ್ಕಂಡ ಸರ್ಕಾರದ ನಿರ್ದೇಶನದಂತೆ ಪ್ರಾಥಮಿಕ ತನಿಖೆ ನಡೆಸಿ ರಾಜ್ಯ ಸರ್ಕಾರಕ್ಕೆ ವರದಿ ಸಲ್ಲಿಸುವ ಸಲುವಾಗಿ ಶ್ರೀಮತಿ ರೋಹಿಣಿ ಸಿಂಧೂರಿ, ಭಾ.ಆ.ಸೇ., ಹಿಂದಿನ ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ಪ್ರಸ್ತುತ ಆಯುಕ್ತರು, ಹಿಂದೂ ಧಾರ್ಮಿಕ ಮತ್ತು ದತ್ತಿಗಳ ಇಲಾಖೆ, ಬೆಂಗಳೂರು ಆದ ನೀವು ನನ್ನ ಸಮಕ್ಷಮ ದಿನಾಂಕ: 30-07-2022 ರಂದು ಬೆಳಿಗ್ಗೆ 11.00 ಗಂಟೆಗೆ ಸರ್ಕಾರದ ಕಾರ್ಯದರ್ಶಿಗಳ ಕಛೇರಿ, ವಸತಿ ಇಲಾಖೆ, ಕೊಠಡಿ ಸಂಖ್ಯೆ: 213, 2ನೇ ಮಹಡಿ, ವಿಕಾಸ ಸೌಧ, ಬೆಂಗಳೂರು - 560001 ಇಲ್ಲಿ ಹಾಜರಾಗಿ ನಿಮ್ಮ ವಿರುದ್ಧ ಹೊರಿಸಲಾಗಿರುವ ಮೇಲ್ಕಂಡ ಆರೋಪಗಳ ಬಗ್ಗೆ ನಿಮ್ಮ ಹೇಳಿಕೆ / ಪೂರಕ ದಾಖಲಾತಿಗಳನ್ನು ನೀಡಲು ತಿಳಿಸಿದೆ. ತಪ್ಪಿದರೆ ನಿಯಮಾನುಸಾರ ವರದಿ ಸಲ್ಲಿಸಲು ಕ್ರಮ ಕೈಗೊಳ್ಳಲಾಗುವುದು.

**(ಡಾ: ಜೆ. ರವಿಶಂಕರ್)**
ಸರ್ಕಾರದ ಕಾರ್ಯದರ್ಶಿಗಳು,
ವಸತಿ ಇಲಾಖೆ.

ಇವರಿಗೆ:

ಶ್ರೀಮತಿ ರೋಹಿಣಿ ಸಿಂಧೂರಿ, ಭಾ.ಆ.ಸೇ.,
ಹಿಂದಿನ ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ,
ಪ್ರಸ್ತುತ ಆಯುಕ್ತರು, ಹಿಂದೂ ಧಾರ್ಮಿಕ ಮತ್ತು ದತ್ತಿಗಳ ಇಲಾಖೆ,
ವಿಕ್ಟರ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು - 560018.

ಪ್ರತಿಯನ್ನು:

1) ಶ್ರೀ ಸಾ.ರಾ. ಮಹೇಶ್, ಮಾನ್ಯ ಶಾಸಕರು, ಕೃಷ್ಣರಾಜನಗರ ಕ್ಷೇತ್ರ ಮತ್ತು ಮಾಜಿ ಸಚಿವರು ಹಾಗೂ ಅಧ್ಯಕ್ಷರು ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿ, ಮೈಸೂರು ಜಿಲ್ಲೆ
2) ಶ್ರೀ ಶೈಲೇಂದ್ರ .ವಿ.ಭೀಮ್ ರಾವ್, ಮಾಜಿ ಉಪ ಮಹಾಪೌರರು, ಮೈಸೂರು ಮಹಾನಗರ ಪಾಲಿಕೆ, ಮೈಸೂರು ಇವರಿಗೆ.